## ಬ್ಯಾಂಕಿನಿಂದ ನೇರವಾಗಿ/ಸಹಕಾರ ಸಂಘಗಳ ಮೂಲಕ ರಚನೆಯಾದ ಸ್ವ ಸಹಾಯ ಗುಂಪುಗಳಿಗೆ ಕಾಯಕ ಯೋಜನೆಯಡಿಯಲ್ಲಿ ಸಾಲ ವಿತರಣೆ ಮಾಡಲು ಸಾಲದ ನಿಯಮಾವಳಿಗಳು.

| ಕ್ರ ಸಂ | ವಿಷಯ | ನಿಯಮಗಳು |
|---|---|---|
| 1 | ಉದ್ದೇಶ (Purpose) | ಸ್ವ ಸಹಾಯ ಗುಂಪುಗಳಿಗೆ **"ಕಾಯಕ"** ಯೋಜನೆಯಡಿಯಲ್ಲಿ ಬ್ಯಾಂಕಿನ ಸಹಾಯವನ್ನು ಕ್ರಮ ಬದ್ಧವಾಗಿ ಉಪಯೋಗ ಮಾಡಿದ ಗುಂಪುಗಳಲ್ಲಿ ಕೌಶಲ್ಯ ಮತ್ತು ಉದ್ಯಮಶೀಲತೆಯನ್ನು ವೃದ್ಧಿಗೊಳಿಸುವ ಉದ್ದೇಶದಿಂದ ಆದಾಯತರುವ ಚಟುವಟಿಕೆಗಳಿಗೆ ಬ್ಯಾಂಕಿನ ಸಾಲ ಹಾಗೂ ರಾಜ್ಯ ಸರ್ಕಾರದ ಬಡ್ಡಿ ಸಹಾಯ ಧನದ ಮಿಶ್ರಣದಿಂದ ಗುಂಪಿನ ಸದಸ್ಯರ ಆರ್ಥಿಕ ಪರಿಸ್ಥಿಯನ್ನು ಉತ್ತಮಗೊಳಿಸಿ ಬಡತನ ರೇಖೆಯಿಂದ ಮೇಲೆ ತರುವ ಉದ್ದೇಶ ಈ ಯೋಜನೆಯದಾಗಿರುತ್ತದೆ. |
| 2 | ಅರ್ಹತೆ (Eligibility) | ಸ್ವ ಸಹಾಯ ಸಂಘದಲ್ಲಿ 10ಕ್ಕಿಂತ ಹೆಚ್ಚು ಮತ್ತು 20ಕ್ಕಿಂತ ಕಡಿಮೆ ಸದಸ್ಯರನ್ನು ಹೊಂದಿರುವ ಸ್ವ ಸಹಾಯ ಗುಂಪುಗಳ ಸದಸ್ಯರ ಪೈಕಿ ಪುರುಷ ಅಥವಾ ಮಹಿಳೆ ಯಾವುದೇ ವ್ಯಕ್ತಿಗಳಿಂದ ಶೇ.70 ಕ್ಕಿಂತ ಹೆಚ್ಚಿನ ಸದಸ್ಯರು ಬಿ.ಪಿ.ಎಲ್ ಸದಸ್ಯರಾಗಿರತಕ್ಕದ್ದು. |
| 3 | ಗುಂಪಿನ ಆಯ್ಕೆ (Selection of group) | ಸ್ವ ಸಹಾಯ ಗುಂಪುಗಳನ್ನು ಈ ಯೋಜನೆಯಡಿಯಲ್ಲಿ ಆಯ್ಕೆ ಮಾಡುವಾಗ ಶಾಖಾ ವ್ಯವಸ್ಥಾಪಕರು ಮತ್ತು ವೃತ್ತ ಮೇಲ್ವಿಚಾರಕರು ಈ ಕೆಳಕಂಡ ಪೆರಾಮೀಟರ್‌ಗಳ ಪ್ರಕಾರ ಮಾಡುವರು.<br>1. ಸ್ವ ಸಹಾಯ ಗುಂಪುಗಳು ಸಭೆಯನ್ನು ತಿಂಗಳಿಗೆ ಕನಿಷ್ಟ 1 ಗರಿಷ್ಟ 4 ಸಭೆ<br>2. ಉಳಿತಾಯವನ್ನು ಕ್ರಮಬದ್ಧವಾಗಿ ಮಾಡುತ್ತಿರಬೇಕು.<br>3. ಆಂತರಿಕ ಸಾಲವನ್ನು ವಿತರಣೆ ಮಾಡಿರಬೇಕು.<br>4. ಆಂತರಿಕ ಸಾಲವನ್ನು ನಿಯಮಿತವಾಗಿ ಮರು ಪಾವತಿ ಮಾಡಿರಬೇಕು.<br>5. ನಡವಳಿಕೆ, ಉಳಿತಾಯ ಮತ್ತು ಸಾಲದ ಪುಸ್ತಕಗಳನ್ನು ಕ್ರಮಬದ್ಧವಾಗಿ ಬರೆದಿರಬೇಕು.<br>6. ಗುಂಪಿನ ಉಳಿತಾಯ ಖಾತೆಯನ್ನು ಶಾಖೆಯಲ್ಲಿ ತೆರೆದು ವ್ಯವಹಾರವನ್ನು ಕ್ರಮಬದ್ಧವಾಗಿ ನಿರ್ವಹಿಸಬೇಕು. |
| 4 | ಗುಂಪುಗಳ ವರ್ಗೀಕರಣ (Grading of group) | ಸ್ವ ಸಹಾಯ ಗುಂಪುಗಳ ಗ್ರೇಡಿಂಗ್ (ವರ್ಗೀಕರಣ) ನಬಾರ್ಡ್‌ನ ನಿರ್ದೇಶನದಂತೆ ವೃತ್ತ ಮೇಲ್ವಿಚಾರಕರು ಖುದ್ದು ಸ್ವ ಸಹಾಯ ಸಂಘಕ್ಕೆ ಭೇಟಿ ನೀಡಿ ಬ್ಯಾಂಕಿನ ನಿಗದಿತ ನಮೂನೆಯ ಪ್ರಕಾರವೇ ಮಾಡಬೇಕು. ಸದರಿ ಗುಂಪು ಕನಿಷ್ಟ 70 ಅಂಕಗಳನ್ನು ಪಡೆಯಬೇಕು. ಆಯ್ಕೆ ಮಾಡಿದ ಗುಂಪಿನಲ್ಲಿ ಒಟ್ಟು ಸದಸ್ಯರ ಪೈಕಿ ಶೇ.70% ರಷ್ಟು ಸದಸ್ಯರು ಬಿ.ಪಿ.ಎಲ್. ವರ್ಗಕ್ಕೆ ಸೇರಿದ ಸದಸ್ಯರಾಗಿದ್ದರೆ ಈ ಯೋಜನೆಯಡಿ ಬಡ್ಡಿ ಸಹಾಯ ಧನ ಪಡೆಯಲು ಅರ್ಹರಾಗುತ್ತಾರೆ. |
| 5 | ಯೋಜನೆಯ ಆಯ್ಕೆ (Selection of Schemes) | ಜಿಲ್ಲೆಯ ಭೌಗೋಳಿಕ ಹಿನ್ನೆಲೆ, ಮಾರುಕಟ್ಟೆ ವ್ಯವಸ್ಥೆ ಮತ್ತು ಕೌಶಲ್ಯದ ಆಧಾರವಾಗಿ ನಿರಂತರ ಆದಾಯ ಗಳಿಸುವ ಸ್ವ ಸಹಾಯ ಗುಂಪಿನ ಎಲ್ಲಾ ಸದಸ್ಯರು ಉದ್ದಿಮೆಯಲ್ಲಿ ಸಾಮೂಹಿಕವಾಗಿ ಬಾಗವಹಿಸುವಂತಹ ಉದ್ಯೋಗವನ್ನು ಕೈಗೊಳ್ಳುಲು ವಿವಿಧ ಇಲಾಖೆಗಳಲ್ಲಿ ಗುರುತಿಸಿರುವ ತರಬೇತಿ ವ್ಯವಸ್ಥೆ ಮತ್ತು ಯೋಜನಾ ವರಧಿಯನ್ನು ತಯಾರಿಸುವರು. ಹೀಗೆ ತಯಾರಿಸಿದ ವರಧಿಯನ್ನು ಬ್ಯಾಂಕಿನ ವ್ಯವಸ್ಥಾಪಕರು ಪರಿಶೀಲಿಸಿದ ನಂತರ ಯೋಜನೆಯು ತಾಂತ್ರಿಕವಾಗಿ ಹಾಗೂ ಆರ್ಥಿಕವಾಗಿ ವಯಬಲ್ ಎಂಬುದನ್ನು ಸ್ಥಳಿಯ ಸನ್ನಿವೇಶಗಳಿಗನುಸಾರವಾಗಿ ಖಾತರಿ ಪಡಿಸಿಕೊಳ್ಳಬೇಕು. ಸಾಲದ ಅರ್ಜಿಗಳನ್ನು ಸಹಕಾರ ಸಂಘಗಳ ಉಪ ನಿಬಂಧಕರು ಶಿಫಾರಸ್ಸು ಮಾಡತಕ್ಕದ್ದು. |

| | | |
|---|---|---|
| 6 | ಸಾಲದ ಮೊತ್ತ (Loan Amount) | ಸಾಲದ ಮಿತಿಯನ್ನು ನಿರ್ಧರಿಸಲು ಯೋಜನಾ ವರದಿಯ ರೀತ್ಯಾ ಬೇಕಾಗಿರುವ ಸಾಲದ ಮೊತ್ತದಲ್ಲಿ ಶೇ.95% ರಷ್ಟು, ಅಥವಾ ಗರಿಷ್ಟ 10.00 ಲಕ್ಷಗಳು ಇದರಲ್ಲಿ ಯಾವುದು ಕಡಿಮೆ ಆ ಮೊತ್ತವನ್ನು ಸಾಲವಾಗಿ ನಿರ್ಧರಿಸಿ, ಶಾಖಾ ವ್ಯವಸ್ಥಾಪಕರು ಶಿಫಾರಸ್ಸು ಮಾಡತಕ್ಕದ್ದು. |
| 7 | ಸಾಲ ಮರುಪಾವತಿ (Loan Repayment) | **ಸಾಲದ ಮರುಪಾವತಿಯ ಅವಧಿಯು ಸಾಲದ ಮೊತ್ತ ಮತ್ತು ಯೋಜನೆಯ ಆಧಾರದ ಮೇಲೆ ನಿರ್ಧರಿಸಬೇಕು.**<br>1. ಸಾಲದ ಮೊತ್ತ ರೂ.5,00,000/-ಗಳ ವರೆಗೆ 12 ತಿಂಗಳ ಅವಧಿಯಲ್ಲಿ ಮರುಪಾವತಿ ಮಾಡಬೇಕು.<br>2. ಸಾಲದ ಮೊತ್ತ ರೂ.5,00,001 ರಿಂದ 7,50,000/-ಗಳ ವರೆಗೆ 24 ತಿಂಗಳ ಅವಧಿಯಲ್ಲಿ ಮರುಪಾವತಿ ಮಾಡಬೇಕು.<br>3. ಸಾಲದ ಮೊತ್ತ ರೂ.7,50,001 ರಿಂದ 10,00,000/-ಗಳ ವರೆಗೆ 36 ತಿಂಗಳ ಅವಧಿಯಲ್ಲಿ ಮರುಪಾವತಿ ಮಾಡಬೇಕು. |
| 8 | ಭದ್ರತೆ (Security) | 1. ಪ್ರಾರ್ಥಮಿಕ ಭದ್ರತೆ<br>2. ಯಾವುದೇ ಕೊಲ್ಯಾಟರಲ್ ಭದ್ರತೆ ಪಡೆಯದೇ ಸಾಲದಿಂದ ನಿರ್ಮಿಸಿದ ಆಸ್ತಿಯನ್ನು ಮತ್ತು ಸಾಲದಿಂದ ಉತ್ಪತ್ತಿಯಾದ ಆಸ್ತಿಗಳ ಮೇಲೆ ಬ್ಯಾಂಕಿಗೆ ಅಡಮಾನ.<br>3. ಗುಂಪಿನ ಸದಸ್ಯರಿಂದ ಗ್ರೂಪ್ ಗ್ಯಾರಂಟಿ ಹೊಣೆ |
| 9 | ವಸೂಲಾತಿ | ಸಾಲವನ್ನು ಮಾಸಿಕ ಸಮಾನ ಕಂತುಗಳಲ್ಲಿ ನಿಯಮಿತ ಅವಧಿಯಲ್ಲಿ ಕಡ್ಡಾಯವಾಗಿ ವಸೂಲಾತಿ ಮಾಡಬೇಕು. |
| 10 | ತೆಗೆದು ಕೊಳ್ಳಬೇಕಾದ ಕಾಗದ ಪತ್ರಗಳು | 1. ಸ್ವ ಸಹಾಯ ಸಂಘದ ಕಾಯಕ ಯೋಜನೆಯಡಿಯಲ್ಲಿ ಸಾಲದ ಅರ್ಜಿ, ಸಂದರ್ಶನ, ಮೌಲ್ಯ ಮಾಪನ ಮತ್ತು ಪ್ರಸ್ತಾವನೆ.<br>2. ಸಂಘದ ಸಭೆಯ ನಡವಳಿಕೆ ಪತ್ರ<br>3. ಸಂಘದ ಹಣಕಾಸಿನ ತಃಖ್ತೆ ವಿವರ.<br>4. ಸಂಘದ ಗ್ರೇಡಿಂಗ್ ಪತ್ರ.<br>5. ಯೋಜನಾ ವರದಿ ಮತ್ತು ತರಬೇತಿ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಇಲಾಖೆಯಿಂದ ಪಡೆಯಬೇಕು.<br>6. ಗುಂಪಿನ ಎಲ್ಲಾ ಸದಸ್ಯರ ಗುರುತಿನ ಚೀಟಿ, ಆಧಾರ್ ಸಂಖ್ಯೆ, ಯೋಜನಾ ಘಟಕದ ಫೋಟೋ ಕಾಪಿಗಳು.<br>7. ಒಪ್ಪಂದ ಪತ್ರ.<br>8. ಇಂಟರ್-ಸೇ-ಒಪ್ಪಂದ ಪತ್ರ.<br>9. ಇತರೆ ಬ್ಯಾಂಕುಗಳು ಅಥವಾ ಹಣಕಾಸು ಸಂಸ್ಥೆಗಳಿಂದ ಸಾಲ ಪಡೇಯದೇ ಇರುವ ಬಗ್ಗೆ ಬೇ ಬಾಕಿ ಪತ್ರ.<br>10. ಡಿಮಾಂಡ್ ಪ್ರಾಮಿಸರಿ ನೋಟ್ ಹಾಗೂ ಡಿಮಾಂಡ್ ಪ್ರಾಮಿಸರಿ ಡೆಲಿವರಿ ಲೆಟರ್.<br>11. ಶಾಖಾ ವ್ಯವಸ್ಥಾಪಕರು ಮತ್ತು ವೃತ್ತ ಮೇಲ್ವಿಚಾರಕರು ಯೋಜನಾ ಘಟಕವನ್ನು ಪರಿಶೀಲಿಸಿರುವ ಬಗ್ಗೆ ವರದಿ.<br>12. ವಚನ ಪತ್ರ ಕಂತುಗಳನ್ನು ಕ್ರಮಬದ್ಧವಾಗಿ ಪಾವತಿ ಮಾಡುವ ಬಗ್ಗೆ.<br>13. ಸಾಲದ ಉಪಯುಕ್ತತೆಯ ದೃಢೀಕರಣ ಪತ್ರ.<br>ಈ ಮೇಲ್ಕಂಡ ಕ್ರಮ ಸಂಖ್ಯೆ 1 ರಿಂದ 13 ರವರೆಗೆ ಅನ್ವಯಿಸುವ ಎಲ್ಲಾ ದಾಖಲಾತಿಗಳೂ, ಸದಸ್ಯರುಗಳು ಮತ್ತು ಪ್ರತಿನಿಧಿಗಳ ಸಹಿಗಳು, ವೃತ್ತ ಮೇಲ್ವಿಚಾರಕರು ಮತ್ತು ಶಾಖಾ ವ್ಯವಸ್ಥಾಪಕರು ಪರಿಶೀಲಿಸಿ ದೃಢೀಕರಿಸಿರತಕ್ಕದ್ದು. |

|  |  |  |
|---|---|---|
| 11 | ಬಡ್ಡಿ ಯನ್ನು ವಿಧಿಸುವ ಬಗ್ಗೆ (Interest Calculation) | **ಸಾಲಕ್ಕೆ ಬಡ್ಡಿಯನ್ನು ಸಾಲದ ಮಿತಿಯನ್ನು ಆಧಾರವಾಗಿಟ್ಟುಕೊಂಡು ಸಾಲಕ್ಕೆ ಬಡ್ಡಿಯನ್ನು ವಿಧಿಸಬೇಕು.**<br>1. ರೂ.5,00,000/-ಗಳ ಸಾಲಗಳಿಗೆ ಶೂನ್ಯ ಬಡ್ಡಿ ದರ<br>2. ರೂ. 5 ಲಕ್ಷದಿಂದ ರೂ.10 ಲಕ್ಷಗಳ ಹೊರಬಾಕಿಗೆ ಶೇ.4% ರ ಬಡ್ಡಿ ದರವನ್ನು ವಿಧಿಸುವುದು.<br>ಡಿಸಿಸಿ ಬ್ಯಾಂಕಿನ ಶಾಖೆಗಳ ಮೂಲಕ ಸ್ವ ಸಹಾಯ ಗುಂಪುಗಳಿಗೆ ವಿತರಿಸಿದ ಸಾಲಗಳಿಗೆ ಮಾತ್ರ ಈ ಬಡ್ಡಿ ದರವು ಅನ್ವಯವಾಗುತ್ತದೆ.<br>**ಸಹಕಾರ ಸಂಘಗಳು ಶೇ.12ರ ಬಡ್ಡಿ ಆಕರಣೆ ಮಾಡಿ ಸಾಲ ವಿತರಿಸತಕ್ಕದ್ದು.** |
| 12 | ಬಡ್ಡಿ ಸಹಾಯ ಧನ (Interest subsidy) | ಸ್ವ ಸಹಾಯ ಗುಂಪುಗಳು ಬ್ಯಾಂಕು ನಿಗದಿಪಡಿಸಿದ ಗಡುವಿನ ದಿನಾಂಕದಿಂದ 30 ದಿನದೊಳಗಾಗಿ ಸಾಲ ಮರುಪಾವತಿಸಬೇಕು. ವಸೂಲಾತಿ ಆಧಾರದ ಮೇಲೆ ತ್ರೈಮಾಸಿಕವಾಗಿ ಬಡ್ಡಿ ಸಹಾಯ ಧನದ ಕ್ಲೈಂ ಬಿಲ್ಲುಗಳನ್ನು ನಿಗದಿತ ನಮೂನೆಯಲ್ಲಿ ತಯಾರಿಸಿ, ಸಹಕಾರ ಸಂಘಗಳ ಉಪ ನಿಬಂಧಕರು ಮತ್ತು ಲೆಕ್ಕ ಪರಿಶೋಧನಾ ಉಪ ನಿರ್ದೇಶಕರು ದೃಢೀಕರಿಸಿ ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕಿನ ಮುಖಾಂತರ ಸಹಕಾರ ಸಂಘಗಳ ನಿಬಂಧಕರಿಗೆ ಸಲ್ಲಿಸತಕ್ಕದ್ದು.<br>ಈ ಮೇಲ್ಕಂಡ ರೀತಿಯಲ್ಲಿ ಸಾಲವನ್ನು ಮರು ಪಾವತಿ ಮಾಡದೇ ಇದ್ದರೆ ಬಡ್ಡಿ ಸಹಾಯ ಧನ ದೊರೆಯುವುದಿಲ್ಲ. ಸಾಮಾನ್ಯ ಬಡ್ಡಿ ದರದಲ್ಲಿ ಸಾಲ ಮರುಪಾವತಿಸತಕ್ಕದ್ದು. |